ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿ.ಆ.ಸು. ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 638 ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

SC.-25 **ಎನ್.ಬಿ. ಗಿರಿಜಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 13 ವೆಚ್ಚ–12/16, ಬೆಂಗಳೂರು, ದಿನಾಂಕ : 06–02–2016.

ಶ್ರೀ ಎನ್. ಮಹದೇವ್, ನಿವೃತ್ತ ಅಧೀನ ಕಾರ್ಯದರ್ಶಿ ಹಾಗೂ ಶ್ರೀ ಹೆಚ್. ಹನುಮಂತಯ್ಯ, ನಿವೃತ್ತ ಉಪ ಕಾರ್ಯದರ್ಶಿ, ಇವರ ಸೇವೆಯನ್ನು ಆರ್ಥಿಕ ಆಯೋಗ ಕೋಶದಲ್ಲಿ ಕ್ರಮವಾಗಿ ಮಾಸಿಕ ₹. 34,000/– ಹಾಗೂ 32,500/– ಗಳ ಸಮಾಲೋಚನಾ ಶುಲ್ಕದೊಂದಿಗೆ ದಿನಾಂಕ : 01–01–2016 ರಿಂದ ಒಂದು ವರ್ಷದ ಅವಧಿಗೆ ಸಮಾಲೋಚಕರನ್ನಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

P.R. 639 ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

SC.-25 **ಎನ್.ಬಿ. ಗಿರಿಜಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 61 ವೆಚ್ಚ–12/16, ಬೆಂಗಳೂರು, ದಿನಾಂಕ : 06–02–2016.

ಸನ್ಮಾನ್ಯ ರಾಜ್ಯಪಾಲರ ನಿವಾಸಕ್ಕೆ ಹೊಸ LED TV ಯನ್ನು ₹. 1.24 ಲಕ್ಷಗಳ ವೆಚ್ಚದಲ್ಲಿ ಮೆ: ವೈಸ್ ವಿಷನ್, ಬೆಂಗಳೂರು ಇವರ ಮೂಲಕ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಿ.ಆ.ಸು. ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿ.ಆ.ಸು. ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 640 ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

SC.-25 **ಎನ್.ಬಿ. ಗಿರಿಜಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 12 ವೆಚ್ಚ–12/16, ಬೆಂಗಳೂರು, ದಿನಾಂಕ : 01–02–2016.

ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ, ಇಲ್ಲಿ ಜೈವಿಕ ಗೊಬ್ಬರ ಉತ್ಪಾದಿಸುವ ಘಟಕಗಳನ್ನು ಭಾರತೀಯ ತೋಟಗಾರಿಕೆ ಸಂಸ್ಥೆ, ಹೆಸರಘಟ್ಟಾ, ಬೆಂಗಳೂರು, ಇವರ ಮೂಲಕ ₹. 10.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 641 ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

SC.-25 **ಎನ್.ಬಿ. ಗಿರಿಜಪ್ಪನವರ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 824 ವೆಚ್ಚ–12/15, ಬೆಂಗಳೂರು, ದಿನಾಂಕ : 01–02–2016.

2015–16ನೇ ಸಾಲಿನಲ್ಲಿ ರಾಜ್ಯದ 61187 ಅಂಗನವಾಡಿ ಕೇಂದ್ರಗಳಿಗೆ ಪ್ರತಿ ಕಿಟ್‌ಗೆ ₹. 1000/– ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳಿಗೆ ಪ್ರತಿ ಕಿಟ್‌ಗೆ ₹. 500/– ರಂತೆ ಔಷಧಿ ಕಿಟ್‌ಗಳನ್ನು M/s. Karnataka Antibiotics & Pharmaceuticals Ltd., (KAPL) ಸಂಸ್ಥೆಯಿಂದ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಔಷಧಿ ಕಿಟ್‌ಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ದೃಢಪಡಿಸಿಕೊಳ್ಳತಕ್ಕದ್ದು.

P.R. 642
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 894 ವೆಚ್ಚ–12/15, ಬೆಂಗಳೂರು, ದಿನಾಂಕ : 30–01–2016.

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದಿಂದ ವಿಶ್ವ ವಿಖ್ಯಾತ ಹಂಪಿ ಪರಂಪರಾ ಪ್ರದೇಶದಲ್ಲಿನ ಸ್ಮಾರಕಗಳಿಗೆ ಸೂಚನಾ ಫಲಕಗಳನ್ನು (Signages) ಅಳವಡಿಸುವ ಬಗ್ಗೆ ಸಾಂಸ್ಕೃತಿಕ ಪಠ್ಯ (Cultural Text) ತಯಾರಿಸುವ ಕಾರ್ಯವನ್ನು INTACH ಆನೆಗುಂದಿ ಸಂಸ್ಥೆಗೆ ಅಂದಾಜು ವೆಚ್ಚ ₹. 30.48 ಲಕ್ಷಗಳ ವೆಚ್ಚದಲ್ಲಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 643
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 15 ವೆಚ್ಚ–12/16, ಬೆಂಗಳೂರು, ದಿನಾಂಕ : 01–02–2016.

ನಿರಂತರ ಜ್ಯೋತಿ ಯೋಜನೆಯಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು ವ್ಯಾಪ್ತಿಯ ಒಟ್ಟು 370 ನಿರಂತರ ಜ್ಯೋತಿ ಮಾರ್ಗಗಳ ವಿಶ್ಲೇಷಣಾ ಕಾರ್ಯವನ್ನು ₹. 2.97 ಕೋಟಿಗಳ ವೆಚ್ಚದಲ್ಲಿ GoI ಸಂಸ್ಥೆಯಾದ CPRI ಗೆ ನೇರವಾಗಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಇಂಧನ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಇಂಧನ ಇಲಾಖೆಯು ದೃಢಪಡಿಸಿಕೊಳ್ಳುವುದು. The Department should satisfy itself regarding the reasonableness of the rates.

P.R. 644
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 55 ವೆಚ್ಚ–12/16, ಬೆಂಗಳೂರು, ದಿನಾಂಕ : 25–01–2016.

ಮಾವು ಅಭಿವೃದ್ಧಿ ಕೇಂದ್ರ, ಚಿಂತಾಮಣಿ, ಇಲ್ಲಿ ಕೊಯ್ಲೋತ್ತರ ನಿರ್ವಹಣೆ ಮತ್ತು ಸಂಸ್ಕರಣೆಗೆ ಸಂಬಂಧಿಸಿದಂತೆ ಯಂತ್ರೋಪಕರಣಗಳನ್ನು ಖರೀದಿಸಿ ಅಳವಡಿಸುವ ಸಲುವಾಗಿ ಸಿ.ಎಫ್.ಟಿ.ಆರ್.ಐ., ಮೈಸೂರು, ಸಂಸ್ಥೆಯ ಸೇವೆಯನ್ನು ತಾಂತ್ರಿಕ ಸಲಹೆಗಾರರನ್ನಾಗಿ ₹. 39.90 ಲಕ್ಷಗಳ ವೆಚ್ಚದಲ್ಲಿ

ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 645
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 881 ವೆಚ್ಚ–12/15, ಬೆಂಗಳೂರು, ದಿನಾಂಕ : 21–01–2016.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮತ್ತು ಅದರ ವ್ಯಾಪ್ತಿಯಲ್ಲಿನ ಯೋಜನಾ ಪ್ರಾಧಿಕಾರಗಳು ಹಾಗೂ ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರಗಳ ಇ–ವಿನ್ಯಾಸ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸುವ ಸೇವೆಯನ್ನು ಮೆ: NIC ಸಂಸ್ಥೆಯ ವತಿಯಿಂದ ₹. 10.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ನಗರಾಭಿವೃದ್ಧಿ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 646
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 18 ವೆಚ್ಚ–12/16, ಬೆಂಗಳೂರು, ದಿನಾಂಕ : 21–01–2016.

ಕೌಶಲ್ಯ ಅಭಿವೃದ್ಧಿ ಯೋಜನೆಯಡಿ 2015–16ನೇ ಸಾಲಿಗೆ ಹಿಂದುಳಿದ ವರ್ಗಗಳ 210 ನಿರುದ್ಯೋಗಿ ಅಭ್ಯರ್ಥಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಮೂಲಕ ಭಾರೀ ವಾಹನ ಚಾಲನಾ ತರಬೇತಿ ಕಾರ್ಯಕ್ರಮವನ್ನು ₹. 36,66,600/– ಗಳ ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 647
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 33 ವೆಚ್ಚ–12/16, ಬೆಂಗಳೂರು, ದಿನಾಂಕ : 23–01–2016.

ತುಮಕೂರು ಜಿಲ್ಲೆಯಲ್ಲಿ ರೈತ ರಕ್ಷಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು BAIF ಸಂಸ್ಥೆಯ ಮೂಲಕ ₹. 14.00 ಲಕ್ಷಗಳ ವೆಚ್ಚದಲ್ಲಿ ಮತ್ತು IDF ಸಂಸ್ಥೆಯ ಮೂಲಕ ₹. 40.00 ಲಕ್ಷಗಳ ವೆಚ್ಚದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸೇವೆಯನ್ನು ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 648
SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 895 ವೆಚ್ಚ–12/15, ಬೆಂಗಳೂರು, ದಿನಾಂಕ : 21–01–2016.

2015–16ನೇ ಸಾಲಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿ/ನೌಕರರಿಗೆ ವಿವಿಧ ವಿಷಯಗಳಿಗೆ ತರಬೇತಿಯನ್ನು ನೀಡಲು ಒಟ್ಟು ₹. 135.00 ಲಕ್ಷಗಳ ವೆಚ್ಚದಲ್ಲಿ ಈ ಕೆಳಗೆ ನಮೂದಿಸಿರುವ ಮುಂದಿನ ಪ್ರತಿಷ್ಠಿತ ಸಂಸ್ಥೆಗಳಿಂದ ನೇರವಾಗಿ ಸೇವಾ ಸಂಗ್ರಹಣೆಯನ್ನು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

1. National Productivity Council, Bengaluru-NPC.
2. National Institute of Micro Small and Medium Enterprises, Hyderabad-in-MSME.
3. Centre for Entrepreneurship Development of Karnataka, Dharwad-CEDOK.
4. Regional Institute of Co-operative Management, Bengaluru-RICM.
5. Global Organisation for Peoples Advancement in Life-Go-PAL.
6. Indian Institute of Cost Accountants of India, Bengaluru-ICAI.

ಈ ಸಂಸ್ಥೆಗಳಿಗೆ ತರಬೇತಿಗಾಗಿ ಅಧಿಕಾರಿ/ನೌಕರರನ್ನು ನಿಯೋಜನೆಗೊಳಿಸುವ ಮೊದಲು ಸಂಬಂಧಿತ ಏಜೆನ್ಸಿಗಳು/ಇಲಾಖೆಗಳು ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ನೀಡಲಾಗುತ್ತಿದೆ ಎಂಬುದನ್ನು ದೃಢಪಡಿಸಿಕೊಳ್ಳತಕ್ಕದ್ದು.

P.R. 649

SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 20 ವೆಚ್ಚ–12/16, ಬೆಂಗಳೂರು, ದಿನಾಂಕ : 19–01–2016.

ಈ ಹಿಂದೆ ಅಧಿಸೂಚನೆ ಸಂ. ಆಇ 471 ವೆಚ್ಚ–12/15, ದಿನಾಂಕ : 13–08–2015 ರಲ್ಲಿ ಇನ್‌ವೆಸ್ಟ್ ಕರ್ನಾಟಕ 2015ರ ಸಮ್ಮೇಳನಕ್ಕೆ ಸಂಬಂಧಿಸಿದಂತೆ M/s. MC & A ಸಂಸ್ಥೆಯ ವತಿಯಿಂದ Advertisements ಸೇವೆಯನ್ನು ₹. 7.00 ಕೋಟಿಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ನೀಡಲಾಗಿದ್ದ ವಿನಾಯಿತಿಯನ್ನು ₹. 12.00 ಕೋಟಿಗಳ ವೆಚ್ಚದಲ್ಲಿ ಪಡೆಯಲು ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 650

SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 9 ವೆಚ್ಚ–12/16, ಬೆಂಗಳೂರು, ದಿನಾಂಕ : 19–02–2016.

KSRTC, BMTC, NWKRTC ಮತ್ತು NEKRTC ಸಂಸ್ಥೆಗಳು ಕೇಂದ್ರ ಸ್ವಾಮ್ಯ ಸಂಸ್ಥೆಯಾದ ಮೆ: National Alluminium Company (NALCO) ಯಿಂದ ಅಗತ್ಯವಿರುವ ಅಲ್ಯೂಮಿನಿಯಂ ಶೀಟ್‌ಗಳನ್ನು ಒಂದು ವರ್ಷದ ಅವಧಿಗೆ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಾರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಅಲ್ಯೂಮಿನಿಯಂ ಶೀಟ್‌ಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಾರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

P.R. 651

SC.-25

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎನ್.ಬಿ. ಗಿರಿಜಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ. (ಸಂಗ್ರಹಣಾ ಕೋಶ)

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 71 ಸಮನ್ವಯ 2016 (ಭಾ) ಬೆಂಗಳೂರು, ದಿನಾಂಕ: 07–06–2016.

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 71 ಸಮನ್ವಯ ದಿನಾಂಕ: 07.04.2016 (ಭಾ) ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇದರ ಅಧಿಕಾರೇತರ ನಿರ್ದೇಶಕರಾದ ಶ್ರೀ ಶೀತಪ್ಪ ಭರಮಪ್ಪ ಅಂಬಲಿ, ಮುಕ್ಕಾಂ, ಬೆಳಕೇರಿ, ಪೋಷ್ಟ್, ಬಿಸಲಹಳ್ಳಿ, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ ಎಂಬುದರ ಬದಲಾಗಿ **"ಶ್ರೀ ಶಿವಪ್ಪ ಭರಮಪ್ಪ ಅಂಬ್ಲಿ, ಮುಕ್ಕಾಂ : ಬೆಳಕೇರಿ, ಪೋಸ್ಟ್: ಬಿಸಲಹಳ್ಳಿ, ತಾಲ್ಲೂಕು : ಬ್ಯಾಡಗಿ, ಹಾವೇರಿ–581106"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

PR-575

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಎ.ಚಪ್ಪರಬಂದ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 38 ಎಲ್‌ಜಿಎಂ 2016, ಬೆಂಗಳೂರು, ದಿನಾಂಕ: 24–06–2016.

ಮೈಸೂರು ಜಿಲ್ಲೆಯ ವರುಣ ವಿಧಾನಸಭಾ ಕ್ಷೇತ್ರದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ರಚಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 47 ಎಲ್‌ಜಿಎಂ 2014, ದಿನಾಂಕ:17–08–2015ರ ಕ್ರಮ ಸಂಖ್ಯೆ 4ರಲ್ಲಿ ಸದಸ್ಯರನ್ನಾಗಿ ನೇಮಿಸಿರುವ ಶ್ರೀ ಮಹದೇವನಾಯಕ, ಆಯರಹಳ್ಳಿ, ಮೈಸೂರು ತಾಲ್ಲೂಕು ಇವರ ನಾಮ ನಿರ್ದೇಶನವನ್ನು ರದ್ದುಪಡಿಸಿ, ಸದರಿ ಸ್ಥಳದಲ್ಲಿ ಶ್ರೀ ಟೈಲರ್ ಮಹದೇವು ಬಿನ್ ಲೇಟ್ ಮಾದೇಗೌಡ, ಜೋಡಿ ಹರಿಹರಪುರ, ಬಿಳಿಗೆರೆ ಹೋಬಳಿ, ಬಿಳುಗುಲ ಅಂಚೆ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

PR-576
SC-20

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉದಯ ಆರ್. ನಾಯಕ್,
ಪೀಠಾಧಿಕಾರಿ,
ಕಂದಾಯ ಇಲಾಖೆ. (ಭೂ ಮಂ–2)

ಪ್ರವಾಸೋದ್ಯಮ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಪ್ರಇ.68.ಪ್ರವಾನಿ 2016, ಬೆಂಗಳೂರು, ದಿನಾಂಕ: 01–07–2016.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆಡಳಿತ ಮಂಡಳಿ ರಚಿಸಿ ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ ಪ್ರಇ 68 ಪ್ರವಾನಿ 2016, ದಿನಾಂಕ: 28.06.2016ರ ಆದೇಶ ಭಾಗದ ಕಂಡಿಕೆ (2) ರಲ್ಲಿ ನಮೂದಿಸಿರುವ ಆಡಳಿತ ಮಂಡಳಿಯ ಸದಸ್ಯರ ಕ್ರಮ ಸಂಖ್ಯೆ 1 ರ ನಂತರ ಕೆಳಕಂಡ ಸರ್ಕಾರದ ಅಧಿಕಾರಿಯನ್ನು ಸದರಿ ಅಧಿಸೂಚನೆಗೆ ಸೇರ್ಪಡೆ ಮಾಡಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ವಿಕಾಸಸೌಧ, ಬೆಂಗಳೂರು	**ಉಪಾಧ್ಯಕ್ಷರು ಸರ್ಕಾರಿ ಸದಸ್ಯರು**

PR-577
SC-25

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ರವಿಮೂರ್ತಿ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆನಾಸ 109 ಇಭತ 2016 ಬೆಂಗಳೂರು, ದಿನಾಂಕ : 12ನೇ ಜುಲೈ 2016

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಬಿ)ರಡಿಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದಂತೆ 2015–16ನೇ ಸಾಲಿನ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ಕೈಪಿಡಿಯಲ್ಲಿರುವಂತೆ ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಅರ್ಚನ ಎಂ.ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005

ಅಧ್ಯಾಯ 4(1)(ಬಿ)

ಕೈಪಿಡಿ 2015–16

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

4(1)(ಬಿ)

(ಅ) ರಚನೆ ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖೆಯಾಗಿದ್ದು, ಇದು ವಿಕಾಸಸೌಧದ ನೆಲಮಹಡಿಯಲ್ಲಿ ಕೊಠಡಿಗಳ ಸಂಖ್ಯೆ:29,30,34 ಮತ್ತು 19ರಲ್ಲಿ ನೆಲೆಗೊಂಡಿದೆ. ಸಾರ್ವಜನಿಕರು ಈ ಇಲಾಖೆಯ ಅಧಿಕಾರಿಗಳನ್ನು ಯಾವುದೇ ಕೆಲಸದ ದಿನದಂದು ಮಧ್ಯಾಹ್ನ 3.30 ಘಂಟೆಯಿಂದ 5.30 ಘಂಟೆಯವರೆಗೆ ನೇರವಾಗಿ ಸಂಪರ್ಕಿಸಬಹುದು.

ಇಲಾಖೆಯ ಸಂಸ್ಥಾಪಟವನ್ನು (Organisation Chart) ಈ ಕೆಳಗಿನಂತಿದೆ:

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

↓

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು

↓

ಸರ್ಕಾರದ ಕಾರ್ಯದರ್ಶಿಗಳು

↓

ಹಿರಿಯ ಪತ್ರಾಂಕಿತ ಆಪ್ತ ಕಾರ್ಯದರ್ಶಿ, ಗ್ರೇಡ್ –2, ಭಾಷಾಂತರಕಾರರು(ಹಿರಿಯ ಸಹಾಯಕರು)

ಶೀಘ್ರಲಿಪಿಗಾರರು – ಕಿರಿಯ ಸಹಾಯಕರು – ಗ್ರೂಪ್ –ಡಿ – ವಾಹನ ಚಾಲಕರು

↓

ಸರ್ಕಾರದ ಉಪ ಕಾರ್ಯದರ್ಶಿ

↓

ಆಪ್ತ ಸಹಾಯಕರು – ಕಿರಿಯ ಸಹಾಯಕರು – ಗ್ರೂಪ್ –ಡಿ

↓

ಸರ್ಕಾರದ ಅಧೀನ ಕಾರ್ಯದರ್ಶಿ (ಆಹಾರ –2)

↓

ಶೀಘ್ರಲಿಪಿಗಾರರು

↓

ಶಾಖಾಧಿಕಾರಿ (ಆಹಾರ –2)

↓

ಹಿರಿಯ ಸಹಾಯಕರು – ಸಹಾಯಕರು–2

ಕಿರಿಯ ಸಹಾಯಕರು – ಬೆರಳಚ್ಚುಗಾರರು – ಗ್ರೂಪ್ – ಡಿ

↓

ಶಾಖಾಧಿಕಾರಿ (ಆಹಾರ –1)

↓

ಸಹಾಯಕರು – ಕಿರಿಯ ಸಹಾಯಕರು – ಬೆರಳಚ್ಚುಗಾರರು – ಗ್ರೂಪ್ – ಡಿ

↓

ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ)

ಹಿರಿಯ ಸಹಾಯಕರು – ಶೀಘ್ರಲಿಪಿಗಾರರು – ಕಿರಿಯ ಸಹಾಯಕರು – ಬೆರಳಚ್ಚುಗಾರರು – ಗ್ರೂಪ್ – ಡಿ

↓

ಶಾಖಾಧಿಕಾರಿ (ಆಹಾರ –3)

ಹಿರಿಯ ಸಹಾಯಕರು – ಕಿರಿಯ ಸಹಾಯಕರು – ಬೆರಳಚ್ಚುಗಾರರು

↓

ಶಾಖಾಧಿಕಾರಿ (ಸ್ವೀಕೃತಿ ಮತ್ತು ರವಾನೆ ಶಾಖೆ)

↓

ಸಹಾಯಕರು – ಕಿರಿಯ ಸಹಾಯಕರು – ಬೆರಳಚ್ಚುಗಾರರು – ಗ್ರೂಪ್ –ಡಿ

(ಆ)ಅಧಿಕಾರಿಗಳ ಮತ್ತು ನೌಕರರ ಅಧಿಕಾರ ಮತ್ತು ಕರ್ತವ್ಯಗಳು:

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ (ಸಚಿವಾಲಯದ)

ವಿವಿಧ ಹಂತದ ಅಧಿಕಾರಿಗಳು, ಅವರ ಜವಾಬ್ದಾರಿಗಳು ಈ ಕೆಳಗಿನಂತಿವೆ:

I ಸರ್ಕಾರದ ಕಾರ್ಯದರ್ಶಿಗಳು

ಇವರು ಇಲಾಖೆಯ ಅಧಿಕೃತ ಮುಖ್ಯಸ್ಥರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಂಬಂಧಿಸಿದಂತೆ ವ್ಯವಹಾರ ನಿಯಮಗಳಿಗೆ ಒಳಪಟ್ಟು ಮತ್ತು ಇಲಾಖೆಯ ಸಚಿವರ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ವಯ ಎಲ್ಲಾ ವ್ಯವಹಾರಗಳ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಾರೆ. ಅಲ್ಲದೆ ತನ್ನ ಅಧೀನದಲ್ಲಿನ ಅಧಿಕಾರಿ/ಸಿಬ್ಬಂದಿಯು ಅವರಿಗೆ ವಹಿಸಿದ ಕೆಲಸವನ್ನು ಸಮರ್ಥವಾಗಿ ಮತ್ತು ತ್ವರಿತವಾಗಿ ನಿರ್ವಹಿಸುವುದರ ಮೇಲ್ವಿಚಾರಣೆ ಸಹ ನೋಡುತ್ತಾರೆ.

II ಸರ್ಕಾರದ ಉಪ ಕಾರ್ಯದರ್ಶಿ

ಇವರು ಇಲಾಖೆಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ವಿಲೇವಾರಿ ಹಾಗೂ ಪ್ರಮುಖ ವಿಷಯಗಳ ಮೇಲಿನ ಕ್ರಮದ ಬಗ್ಗೆ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆಗಳನ್ನು ಮಂಡಿಸುವುದು ಹಾಗೂ ಇಲಾಖೆಯಲ್ಲಿ ಸಂಘಟನೆ ಮತ್ತು ವಿಧಾನಗಳ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

III ಸರ್ಕಾರದ ಅಧಿನ ಕಾರ್ಯದರ್ಶಿ(ಆಹಾರ–2)

ಇವರು ಆಹಾರ–2 ಶಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡ ವಿಷಯಗಳನ್ನು ನಿರ್ವಹಿಸುತ್ತಾರೆ:

- ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ ಮತ್ತು ವಿಲೇವಾರಿ ವಿಷಯ.
- ಸಗಟು ಸಾಗಾಣಿಕೆಗೆ ಸಂಬಂಧಿಸಿದ ಟೆಂಡರ್ ವಿಷಯಗಳು.
- ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿಯ ವಿಷಯ.
- ಸಾರ್ವಜನಿಕ ವಿತರಣಾ ಪದ್ಧತಿಯಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಆಹಾರ ಧಾನ್ಯ(ಅಕ್ಕಿ ಮತ್ತು ಗೋಧಿ) ವಿತರಣೆಯ ಕುರಿತು.
- ಸಾರ್ವಜನಿಕ ವಿತರಣಾ ಪದ್ಧತಿ ಅಡಿಯಲ್ಲಿ ಬರುವ ದೂರುಗಳು.
- ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನದಲ್ಲಿ ಬರುವ ನಿರ್ವಹಣೆ ಪ್ರಶ್ನೆಗಳಿಗೆ ಉತ್ತರ ನೀಡುವ ಬಗ್ಗೆ.
- ಲೋಕಸಭಾ ಹಾಗೂ ರಾಜ್ಯಸಭಾ ಪ್ರಶ್ನೆಗಳಿಗೆ ಉತ್ತರ ನೀಡುವ ಬಗ್ಗೆ.
- ಕೇಂದ್ರ ಸರ್ಕಾರದಿಂದ ಬರುವ ನಿಯತ ಕಾಲಿಕ ವರದಿಗಳು/ ಸಕಾಲ ಯೋಜನೆಯ 2011ರ ಕಾಯ್ದೆಗೆ ಸಂಬಂಧಿಸಿದ ಎಲ್ಲಾ ವಿಷಯಗಳು.
- Stock statement of food grains A/c No.I, II, III & IV / credit for procurement of food grains-Kharif, Credit for procurement of food grains-Rabi.
- ಹೊಸ ನ್ಯಾಯಬೆಲೆ ಅಂಗಡಿಗಳಿಗೆ ಪ್ರಾಧೀಕರಣ ನೀಡುವ, ನ್ಯಾಯಬೆಲೆ ಅಂಗಡಿಗಳ ಅಕ್ರಮ ಅವ್ಯವಹಾರಗಳ ಬಗ್ಗೆ ದೂರು.
- ಕಲ್ಯಾಣ ಸಂಸ್ಥೆಗಳ ಯೋಜನೆಯಡಿ ಬಿ.ಪಿ.ಎಲ್. ದರದಲ್ಲಿ ಆಹಾರಧಾನ್ಯವನ್ನು ಹಂಚಿಕೆ ನೀಡುವ ಬಗ್ಗೆ.
- ನ್ಯಾಯಬೆಲೆ ಅಂಗಡಿ/ಸಂಗ್ರಹಣಾ ಕೇಂದ್ರ/ ಆಹಾರ ಸಗಟು ಮಳಿಗೆಗಳ ತಪಾಸಣೆ.
- ಸೀಮೆ ಎಣ್ಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳು (ಕಾಸ್ಟ್ ಶೀಟ್ ರಿವಿಷನ್ ಆಫ್ ರೇಟ್/ ರಿಟ್ ಅರ್ಜಿಗಳು)
- ಸಕ್ಕರೆ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು (ಸಕ್ಕರೆ ಖರೀದಿ, ದರಪಟ್ಟಿ ನಿಗಧಿಪಡಿಸುವುದು, ಕೇಂದ್ರ ಸರ್ಕಾರದ ಸಹಾಯಧನ ವಿಷಯ)
- ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ಗ್ರೂಪ್ –ಎ ಮತ್ತು ಗ್ರೂಪ್–ಬಿ ವೃಂದದ ಅಧಿಕಾರಿಗಳ ಸೇವಾ ವಿಷಯಗಳು, ಉಪ ನಿಯಂತ್ರಕರುಗಳ ಆಸ್ತಿ ಮತ್ತು ದಾಯಿತ್ವಗಳ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಪ್ರಕರಣಗಳ ಬಗ್ಗೆ ವ್ಯವಹರಿಸುವುದು. ಗ್ರೂಪ್ – ಸಿ ಮತ್ತು ಗ್ರೂಪ್–ಡಿ ವೃಂದದ

ನೌಕರುಗಳ ಸೇವಾ ವಿಷಯಗಳು ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ನಿಯಂತ್ರಕರು, ಕಾಮಾಶಾ ಇಲಾಖೆ, ಇವರಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುವುದು.

III ಶಾಖಾಧಿಕಾರಿ–1 (ಆಹಾರ –1)

- ಅಗತ್ಯ ವಸ್ತುಗಳ ಕಾಯಿದೆ, 1955 ಮತ್ತು 1992ರ ಅಡಿಯಲ್ಲಿ ದಾಖಲಾಗುವ ಮೇಲ್ಮನವಿ/ರಿವಿಜನ್ ಪ್ರಕರಣಗಳ ಕಡತ ನಿರ್ವಹಣೆ (ಇಸಿಎ)
- ಆಹಾರಧಾನ್ಯಗಳ ದರ ಪಟ್ಟಿ (ಅಕ್ಕಿ, ರಾಗಿ ಮತ್ತು ಜೋಳಗಳ ದರಪಟ್ಟಿ).
- ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದಂತೆ ಗ್ರೂಪ್ – ಎ ವೃಂದದ ಅಧಿಕಾರಿಗಳ ಸೇವಾ ವಿಷಯಗಳು, ಉಪ ನಿರ್ದೇಶಕರುಗಳ ಆಸ್ತಿ ಮತ್ತು ದಾಯಿತ್ವಗಳ ವಿವರಗಳ ಬಗ್ಗೆ ಪರಿಶೀಲಿಸಿ ಟಿಪ್ಪಣಿ ಮಾಡಿಕೊಳ್ಳುವುದು, ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಪ್ರಕರಣಗಳ ಬಗ್ಗೆ ವ್ಯವಹರಿಸುವುದು. ಗ್ರೂಪ್ –ಬಿ/ಸಿ/ಡಿ ವೃಂದದ ಅಧಿಕಾರಿ/ನೌಕರರುಗಳ ಸೇವಾ ವಿಷಯಗಳು ಹಾಗೂ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ ಆಯುಕ್ತರಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುವುದು.

IV. ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ)

ಇವರ ವ್ಯಾಪ್ತಿಗೆ ಸಮನ್ವಯ ಹಾಗೂ ಪತ್ರ ಸ್ವೀಕೃತಿ ಮತ್ತು ರವಾನೆ ಶಾಖೆ ಒಳಪಡುತ್ತದೆ. ಸದರಿ ಶಾಖೆಗಳಲ್ಲಿ ನಿರ್ವಹಿಸುವ ವಿಷಯಗಳು ಈ ಕೆಳಗಿನಂತಿವೆ.

ಸಮನ್ವಯ:

- ಸೇವಾ ವಿಷಯ ಹೊರತುಪಡಿಸಿ ಇಲಾಖಾ ಮುಖ್ಯಸ್ಥರಿಂದ ಸ್ವೀಕರಿಸುವ ಎಲ್ಲಾ ರೀತಿಯ ಸಮನ್ವಯ ವಿಷಯಗಳ ನಿರ್ವಹಣೆ.
- ಮಹಾಲೇಖಪಾಲರ ಆಡಿಟ್ ಪ್ಯಾರಗಳಿಗೆ ಸಂಬಂಧಿಸಿದ ವಿಷಯಗಳು.
- ಗ್ರಾಹಕರ ಚಟುವಟಿಕೆಗಳನ್ನು ನಡೆಸುವ ಸಂಬಂಧ ಸ್ವೀಕರಿಸುವ ಪ್ರಸ್ತಾವನೆಗಳ ಮೇಲೆ ಕ್ರಮ ವಹಿಸುವುದು.
- ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ, ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಂಬಂಧಿಸಿದಂತೆ ಯೋಜನೆ/ಯೋಜನೇತರ ಅಡಿಯಲ್ಲಿ ಆಯವ್ಯಯ ಬಿಡುಗಡೆಗೆ ಸಂಬಂಧಿಸಿದ ವಿಷಯಗಳು.
- ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಸಂಪೂರ್ಣ ಗಣಕೀಕರಣದ ಬಗ್ಗೆ.
- ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗುವ ರಿಟ್ ಪ್ರಕರಣಗಳ ನಿರ್ವಹಣೆ.
- ಸ್ವೀಕೃತಿ ಮತ್ತು ರವಾನೆ ಶಾಖೆಯ ದೈನಂದಿನ ಕಾರ್ಯನಿರ್ವಹಣೆಯ ಮೇಲುಸ್ತುವಾರಿ.

V. ಶಾಖಾಧಿಕಾರಿ –3 (ಆಹಾರ –3)

ಇವರು ಈ ಕೆಳಕಂಡ ವಿಷಯಗಳನ್ನು ನಿರ್ವಹಿಸುವರು:

- ಆಹಾರ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬಗೆಗಿನ ವಿಷಯಗಳು.
- ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತಕ್ಕೆ ಸಂಬಂಧಿಸಿದಂತೆ ಸೇವಾ ಹಾಗೂ ಇನ್ನಿತರೆ ವಿಷಯಗಳು (Arbitration cases, Nomination of Board of Directors and Service matters of KFCSC).
- Writ Petitions.
- ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಂಬಂಧಿಸಿದ ಸೇವಾ ವಿಷಯಗಳು.
- ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ವಿಷಯ.
- ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ವೇದಿಕೆಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಗಳ ವಿಲೇವಾರಿ ಬಗ್ಗೆ.
- ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ವೇದಿಕೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸ್ವೀಕರಿಸಿದ ದೂರುಗಳ ವಿಲೇವಾರಿ.
- ವಿ.ಸಭೆ/ಪರಿಷತ್ತು ಅಧಿವೇಶನ ಸಮಯದಲ್ಲಿ ಮೇಲ್ಕಂಡ ವಿಷಯಗಳ ಮೇಲೆ ಬರುವ ಪ್ರಶ್ನೆಗಳ ನಿರ್ವಹಣೆ ಹಾಗೂ ಸಿ.ಆ.ಸು.ಇಲಾಖೆಯಿಂದ ಬರುವ ವಿಧಾನ ಪರಿಷತ್ತಿನ ಸಾಮಾನ್ಯ ಮತ್ತು ವರ್ಗಾವಾಗಿ ಬರುವ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ನಿರ್ವಹಣೆ.
- ಕೇಂದ್ರ ಸರ್ಕಾರದ ಗ್ರಾಹಕರ ಹಕ್ಕುಗಳ ಸಂರಕ್ಷಣೆ ಬಗ್ಗೆ ಬರುವ ಸೂಚನೆಗಳಿಗೆ ಕ್ರಮ ವಹಿಸುವುದು.

VI. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ:

ಇವರು ಈ ಕೆಳಕಂಡ ವಿಷಯಗಳನ್ನು ನಿರ್ವಹಿಸುತ್ತಾರೆ:

- ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದಂತೆ ಹೊರಗಿನಿಂದ ಟಪಾಲುಗಳನ್ನು ಸ್ವೀಕರಿಸಿ, ಗಣಕ ಯಂತ್ರದಲ್ಲಿ ನಮೂದಿಸಿ ಸ್ವೀಕೃತಿಗಳನ್ನು ಎಲ್ಲಾ ಶಾಖೆಗಳಿಗೆ ವರ್ಗೀಕರಿಸಿ ಹಂಚುವುದು ಹಾಗೂ ಶಾಖೆಗಳಿಂದ ಸ್ವೀಕರಿಸಿದ ಪತ್ರಗಳನ್ನು ಹೊರಗಿನ ವಿವಿಧ ಇಲಾಖೆಗಳಿಗೆ ರವಾನಿಸುವುದು.
- ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದಂತೆ ನಡೆಯುವ ಎಂಎಂಆರ್, ಕಡತ ವಿಲೇವಾರಿ, ಕಂಪೆಂಡಿಯಂನ ನಿರ್ವಹಣೆ ಹಾಗೂ ವಾರ್ಷಿಕ ವರದಿ ಮತ್ತು ಕಾರ್ಯ ನಿರ್ವಹಣಾ ವರದಿಗಳನ್ನು ತಯಾರಿಸುವುದು.
- ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಆಂತರಿಕ ಸೇವಾ ವಿಷಯಗಳು.
- ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆಯಿಂದ ಲೇಖನ ಸಾಮಗ್ರಿಗಳನ್ನು ಪಡೆದು ಇಲಾಖೆಯ ಎಲ್ಲಾ ಶಾಖೆಗಳಿಗೆ ವಿತರಿಸುವುದು.
- ಮಾಹಿತಿ ಹಕ್ಕು ಅಧಿನಿಯಮ ಕಾಯಿದೆ 4(1)(ಎ) ಮತ್ತು 4(1)(ಬಿ)ಗೆ ಸಂಬಂಧಪಟ್ಟ ವಿಷಯಗಳು.
- KDP ಸಭೆ, ಅಡ್‌–ಹಾಕ್ ಸಮಿತಿ ಸಭೆ ಮತ್ತು ಸಿಬ್ಬಂದಿ ಸಭೆ ಕುರಿತ ಸಂಯೋಜನಾ ಕ್ರಮ.
- ವಿ.ಸಭೆ/ಪರಿಷತ್ತು ಅಧಿವೇಶನದ ಸಮಯದಲ್ಲಿ ಇಲಾಖೆಗೆ ಬರುವ ಪ್ರಶ್ನೆಗಳನ್ನು ಕ್ರೋಢೀಕರಿಸುವುದು ಹಾಗೂ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ಅಧಿವೇಶನಕ್ಕೆ ಹಾಜರಾಗಲು ಹಾಗೂ ಪ್ರಶ್ನೆಗಳನ್ನು (Business) ತಂದುಕೊಡಲು ಅಧೀವೇಶನದ ಕೆಲಸಕ್ಕೆ ನೇಮಿಸುವುದು.

VII. ಹಿರಿಯ ಸಹಾಯಕರು/ ಸಹಾಯಕರು

ಶಾಖಾಧಿಕಾರಿಯವರ ಆದೇಶದಂತೆ ಇವರು ಕಾರ್ಯನಿರ್ವಹಿಸುತ್ತಾರೆ. ಶಾಖೆಯಲ್ಲಿ ವ್ಯವಹರಿಸಲು ಹಂಚಿಕೆಯಾಗಿರುವ ವಿಷಯ ಶೀರ್ಷಿಕೆಗಳಿಗೆ ಸಂಬಂಧಿಸಿದ ಪ್ರಕರಣಗಳ ಕುರಿತಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳ ಬಗ್ಗೆ ಕೂಡಲೇ ಪರಿಶೀಲಿಸಿ, ಸೂಕ್ತ ಟಿಪ್ಪಣಿ ಬರೆಯುವುದು ಕರಡುಗಳನ್ನು ತಯಾರಿಸುವುದು ಮತ್ತು ಸೂಕ್ತ ಉಲ್ಲೇಖಗಳನ್ನು ಒದಗಿಸಿ ಶಾಖಾಧಿಕಾರಿಗಳಿಗೆ ಕಡತವನ್ನು ಮಂಡಿಸುತ್ತಾರೆ. ಇವರು ಸಚಿವಾಲಯ ಕೈಪಿಡಿಯಲ್ಲಿ ಸೂಚಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

VIII. ಶೀಘ್ರಲಿಪಿಗಾರರು:

ತನ್ನ ಮೇಲಾಧಿಕಾರಿಯು ನೀಡುವ ಉಕ್ತಲೇಖನವನ್ನು ಶೀಘ್ರಲಿಪಿಯಲ್ಲಿ ಬರೆದುಕೊಂಡು ಅದರ ಬೆರಳಚ್ಚು (ಗಣಕಯಂತ್ರದಿಂದ) ತಯಾರಿಸುತ್ತಾರೆ.

IX. ಕಿರಿಯ ಸಹಾಯಕರು:

ತಮಗೆ ವಹಿಸಿದ ವಿಷಯಗಳ ಬಗೆಗೆ ನಿಗಧಿಪಡಿಸಿದ ರಿಜಿಸ್ಟರುಗಳನ್ನು ನಿರ್ವಹಿಸುವುದು. ಗಣಕಯಂತ್ರಗಳಲ್ಲಿ ಕಡತಗಳನ್ನು ದಾಖಲಿಸುವುದು ರವಾನಿಸುವುದು ಹಾಗೂ ಶಾಖೆಯಲ್ಲಿ ಕಡತ/ ಸ್ವೀಕೃತಿಗಳನ್ನು ಸಂಬಂಧಪಟ್ಟವರಿಗೆ ನೀಡುತ್ತಾರೆ.

X. ಬೆರಳಚ್ಚುಗಾರರು:

ಶಾಖೆಯಲ್ಲಿನ ಎಲ್ಲಾ ಬೆರಳಚ್ಚು ಕೆಲಸಗಳನ್ನು ಗಣಕಯಂತ್ರಗಳಲ್ಲಿ ನಿರ್ವಹಿಸುವುದು.

XI. ಗ್ರೂಪ್ – ಡಿ

ಶಾಖೆಯನ್ನು ಚೊಕ್ಕಟವಾಗಿಡುವುದು, ಸಚಿವಾಲಯದೊಳಗಿನ ಇಲಾಖೆಗೆ / ಶಾಖೆಗೆ ಕಡತಗಳನ್ನು/ ಟಪಾಲುಗಳನ್ನು ತೆಗೆದುಕೊಂಡು ಹೋಗುವ ಕಾರ್ಯ ನಿರ್ವಹಿಸುತ್ತಾರೆ.

iii) ಕಲಂ 4(1)(ಬಿ)ಗೆ ಸಂಬಂಧಿಸಿದಂತೆ

ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ:

ಇಲಾಖಾ ಮುಖ್ಯಸ್ಥರುಗಳಿಂದ ಈ ಸಂಬಂಧ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಹಾಗೂ ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರನ್ವಯ ಅಂದರೆ, ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಇವರಿಂದ ಪ್ರಸ್ತಾವನೆಗಳು ಸ್ವೀಕೃತವಾದೊಡನೆ ಸಂಬಂಧಿಸಿದ ಹಿರಿಯ ಸಹಾಯಕರು/ ಸಹಾಯಕರು ಹೊಸ ಕಡತವನ್ನು ತೆರೆದು ಅಥವಾ ವಿಷಯದ ಬಗ್ಗೆ ಲಭ್ಯವಿದ್ದ ಹಿಂದಿನ ಕಡತದಲ್ಲಿ ಸಂಬಂಧಪಟ್ಟ ನಿಯಮಗಳ ಅಡಿಯಲ್ಲಿ ಟಿಪ್ಪಣಿಯನ್ನು ಮಂಡಿಸುತ್ತಾರೆ. ಈ ಟಿಪ್ಪಣಿಗಳನ್ನು ಸಂಬಂಧಿಸಿದ ಶಾಖಾಧಿಕಾರಿಯವರು ಪರಿಶೀಲಿಸಿ ಅಧೀನ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರಿಗೆ ಮಂಡಿಸುತ್ತಾರೆ. ಸರ್ಕಾರದ ಅಧೀನ ಕಾರ್ಯದರ್ಶಿಯವರು ನಿಯಮಗಳಡಿಯಲ್ಲಿ ಪರಿಶೀಲಿಸಿ, ಸರ್ಕಾರದ ಉಪ ಕಾರ್ಯದರ್ಶಿಯವರಿಗೆ ಮಂಡಿಸುತ್ತಾರೆ. ಉಪ ಕಾರ್ಯದರ್ಶಿಯವರು ಪರಿಶೀಲಿಸಿ, ಮುಂದಿನ ಆದೇಶಕ್ಕಾಗಿ ಕಾರ್ಯದರ್ಶಿಯವರಿಗೆ ಕಡತವನ್ನು ಮಂಡಿಸುತ್ತಾರೆ. ಕಾರ್ಯದರ್ಶಿಯವರು ಅಂತಿಮ ನಿರ್ಣಯ ಕೈಗೊಳ್ಳುತ್ತಾರೆ ಅಥವಾ ಅಗತ್ಯವಿದ್ದಲ್ಲಿ ಕಡತವನ್ನು ಮಾನ್ಯ ಸಚಿವರಿಗೆ ಸಲ್ಲಿಸುತ್ತಾರೆ.

ಇಲಾಖೆಯ ಅಧಿಕಾರಗಳು ವಿವಿಧ ಹಂತದ ಅಧಿಕಾರಿಗಳಿಗೆ ಹಂಚಿಕೆಯಾಗಿದ್ದು, ಈ ಹಂಚಿಕೆಯಂತೆ ಅವರವರ ಅಧಿಕಾರ ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ತೆಗೆದುಕೊಳ್ಳಬೇಕಾದ ನಿರ್ಣಯಗಳ ಬಗೆಗೆ ಅಧಿಕಾರವನ್ನು ಸರ್ಕಾರದ ಆದೇಶ ಸಂ. ಆನಾಸ 142 ಇಭತ 2001, ದಿನಾಂಕ: 03.06.2002ರಲ್ಲಿ ಪ್ರತ್ಯಾಯೋಜಿಸಲಾಗಿದೆ.

ಇತರೆ ಇಲಾಖೆಗಳ ಉದಾ: ಆರ್ಥಿಕ ಇಲಾಖೆ/ ಕಾನೂನು ಇಲಾಖೆ/ ಸಿ.ಆ.ಸು.ಇಲಾಖೆ/ ಯೋಜನಾ ಇಲಾಖೆಗಳ ಸಹಮತಿ ಅಗತ್ಯವಿದ್ದಲ್ಲಿ, ಕಡತಗಳನ್ನು ಇಲಾಖೆಗಳಿಗೆ ಕಳುಹಿಸಿ ಸಹಮತಿಯನ್ನು ಪಡೆದು ಕೊಳ್ಳಲಾಗುವುದು.

ಈ ಸಂಬಂಧ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಹಾಗೂ ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರನ್ವಯ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

(iv) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು

ಹಾಗೂ

(v) ಕಾರ್ಯನಿರ್ವಹಣೆಗಾಗಿ ಇಲಾಖೆ ಹೊಂದಿರುವ ಅಥವಾ ಇದರ ನಿಯಂತ್ರಣದಲ್ಲಿರುವ ಅಥವಾ ಇಲಾಖೆಯ ಉದ್ಯೋಗಿಗಳು ಬಳಸುವ, ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳ ವಿವರಗಳು ಈ ಕೆಳಗಿನಂತಿವೆ:

1. ಕರ್ನಾಟಕ ನಾಗರಿಕ ಸೇವಾ ನಿಯಮಗಳು.
2. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957.
3. ಕರ್ನಾಟಕ ಆರ್ಥಿಕ ಸಂಹಿತೆ.
4. ಕರ್ನಾಟಕ ಖಜಾನೆ ಸಂಹಿತೆ.
5. ಸಚಿವಾಲಯ ಕೈಪಿಡಿ.
6. ಕರ್ನಾಟಕ ಅಕ್ಕಿ ಗಿರಣಿ ನಿಯಂತ್ರಣ, ಅಕ್ಕಿ ಮತ್ತು ಭತ್ತ ಸಂಗ್ರಹಣೆ (ಲೆವಿ) ಆದೇಶ, 1999.
7. ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ, 1992.
8. ಕರ್ನಾಟಕ ಅಗತ್ಯ ವಸ್ತುಗಳ ಪರವಾನಗಿ ಆದೇಶ, 1986.
9. ಅಗತ್ಯ ವಸ್ತುಗಳ ಅಧಿನಿಯಮ, 1955 (ಕೇಂದ್ರ ಅಧಿನಿಯಮ).
10. ಕರ್ನಾಟಕ ಅಗತ್ಯ ವಸ್ತುಗಳ ಪರವಾನಗಿ ಆದೇಶ, 1986 (ಕೇಂದ್ರ ಆದೇಶ).
11. ಮೋಟಾರ್ ಸ್ಪಿರಿಟ್ ಮತ್ತು ಹೈಸ್ಪೀಡ್ ಡೀಸಲ್ (ಸರಬರಾಜು ಮತ್ತು ಹಂಚಿಕೆ ನಿಯಂತ್ರಣ ಹಾಗೂ ಅವ್ಯವಹಾರಗಳ ತಡೆಗಟ್ಟುವಿಕೆ) ಆದೇಶ, 1998 (ಕೇಂದ್ರ ಅಧಿನಿಯಮ)
12. The liquefied petroleum Gas (Regulation of Supply and Distribution Order, 2000)
13. Lubricating Oils and Greases (Processing, Supply and Distribution Regulation) Order, 1987.
14. Petroleum Products (Maintenance of Production storage and supply) Order, 1999.
15. Naptha (Acquisition, Sale, Storage and prevention of use in automobile) Order, 2000.
16. Edible Oil Packaging (Regulation) Order, 1998.
17. The Kerosene (Restriction on use and fixation of Ceiling price) Order, 1993.
18. ಪ್ರಮಾಣಬದ್ಧ ತೂಕ ಮತ್ತು ಅಳತೆ ಕಾಯಿದೆ, 1976.
19. ಪ್ರಮಾಣಬದ್ಧ ತೂಕ ಮತ್ತು ಅಳತೆ (ಅಮಲುಜಾರಿ) ಕಾಯಿದೆ, 1985.
20. ಪ್ರಮಾಣಬದ್ಧ ತೂಕ ಮತ್ತು ಅಳತೆ (ಪೊಟ್ಟಣ ಸಾಮಾಗ್ರಿ) ನಿಯಮಗಳು, 1977.
21. ಪ್ರಮಾಣಬದ್ಧ ತೂಕ ಮತ್ತು ಅಳತೆ (ಮಾದರಿಗಳ ಅನುಮೋದನೆ) ನಿಯಮಗಳು, 1987.
22. ಪ್ರಮಾಣಬದ್ಧ ತೂಕ ಮತ್ತು ಅಳತೆ (ಅಂತರರಾಜ್ಯ ಸತ್ಯಾಪನೆ ಮತ್ತು ಮುದ್ರೆ) ನಿಯಮಗಳು, 1987.
23. ಪ್ರಮಾಣಬದ್ಧ ತೂಕ ಮತ್ತು ಅಳತೆ (ಸಂಖ್ಯೆಗಳು) ನಿಯಮಗಳು, 1987.
24. ಪ್ರಮಾಣಬದ್ಧ ತೂಕ ಮತ್ತು ಅಳತೆ (ಸಾಮಾನ್ಯ) ನಿಯಮಗಳು, 1987.
25. ಪ್ರಮಾಣಬದ್ಧ ತೂಕ ಮತ್ತು ಅಳತೆ (ರಾಷ್ಟ್ರೀಯ ಮಾನಕಗಳು) ನಿಯಮಗಳು, 1988.
26. ಕರ್ನಾಟಕ ಪ್ರಮಾಣಬದ್ಧ ತೂಕ ಮತ್ತು ಅಳತೆ (ಅಮಲುಜಾರಿ) ನಿಯಮಗಳು, 1988.
27. ಕೇಂದ್ರ ಸರ್ಕಾರದ ಗ್ರಾಹಕರ ಸಂರಕ್ಷಣಾ ಕಾಯ್ದೆ, 1986ರಡಿಯಲ್ಲಿ ಕರ್ನಾಟಕ ಗ್ರಾಹಕರ ಹಿತರಕ್ಷಣಾ ಕಾಯ್ದೆ, 1988.

(vi) ಇಲಾಖೆ ಹೊಂದಿರುವ ಅಥವಾ ಇದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಗಳ ಪಟ್ಟಿ:

1) ಸರ್ಕಾರದ ಆದೇಶಗಳು

2) ಸುತ್ತೋಲೆಗಳು

3) ಅಧಿಸೂಚನೆಗಳು

(vii) ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:

ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ ಯಾವುದೂ ಇರುವುದಿಲ್ಲ

(viii) ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತವೆಯೇ ಎಂಬುದರ ಬಗ್ಗೆ ವಿವರಗಳ ಪಟ್ಟಿ:

ಈ ಇಲಾಖೆಯ ವ್ಯಾಪ್ತಿಯಲ್ಲಿ ಈ ಕೆಳಗಿನವು ಬರುತ್ತದೆ:–

1) ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ.

2) ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ.

3) ರಾಜ್ಯ ಗ್ರಾಹಕರ ಕಲ್ಯಾಣ ನಿಧಿ ಸಮಿತಿ.

4) ಕಾನೂನು ಮಾಪನಶಾಸ್ತ್ರ ಇಲಾಖೆ.

ಈ ಸಮಿತಿಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ. ಆದರೆ, ಕೋರಿಕೆಯ ಮೇರೆಗೆ ಹಾಗೂ ನಿಯಮಾನುಸಾರ ಈ ಸಮಿತಿಗಳ ಸಭೆಗಳ ನಡವಳಿಗಳನ್ನು ಸಾರ್ವಜನಿಕರಿಗೆ ಒದಗಿಸಲಾಗುವುದು.

(iX) ಅಧಿಕಾರಿಗಳ ಮತ್ತು ನೌಕರರ ವಿವರ:

ಕ್ರ.ಸಂ.	ಪದನಾಮ	ಕಛೇರಿ ದೂರವಾಣಿ ಸಂಖ್ಯೆ
01	ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ, ಬೆಂಗಳೂರು–1 **E-Mail:** prs-karnataka.gov.in	22259024 / 22034653
02	ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ, ಬೆಂಗಳೂರು–1	22034189
03	ಸರ್ಕಾರದ ಅಧೀನ ಕಾರ್ಯದರ್ಶಿ (ಆಹಾರ– 2)	22034199
04	ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ)	22034198
05	ಶಾಖಾಧಿಕಾರಿ (ಆಹಾರ–1)	22034219
06	ಶಾಖಾಧಿಕಾರಿ (ಆಹಾರ–2)	22034218
07	ಶಾಖಾಧಿಕಾರಿ (ಆಹಾರ–3)	22034202
08	ಶಾಖಾಧಿಕಾರಿ (ಸ್ವೀಮರ)	22034209
09	ಹಿರಿಯ ಆಪ್ತ ಕಾರ್ಯದರ್ಶಿ (ಕಾರ್ಯದರ್ಶಿಯವರ ಆಪ್ತ ಶಾಖೆ)	22034652
10	ಭಾಷಾಂತರಕಾರರು (ಹಿರಿಯ ಸಹಾಯಕರು)	22034652
11	ಆಪ್ತ ಸಹಾಯಕರು (ಕಾರ್ಯದರ್ಶಿಯವರ ಆಪ್ತ ಶಾಖೆ)	22034652
12	ಆಪ್ತ ಸಹಾಯಕರು (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	22034195

ಕ್ರ.ಸಂ.	ಪದನಾಮ	ಕಛೇರಿ ದೂರವಾಣಿ ಸಂಖ್ಯೆ
13	ಹಿರಿಯ ಸಹಾಯಕರು (ಆಹಾರ –2)	22034218
14	ಹಿರಿಯ ಸಹಾಯಕರು (ಆಹಾರ–3)	22034209
15	ಹಿರಿಯ ಸಹಾಯಕರು (ಸಮನ್ವಯ)	22034198
16	ಸಹಾಯಕರು (ಆಹಾರ – 1)	22034219
17	ಸಹಾಯಕರು (ಆಹಾರ–2)	22034218
18	ಸಹಾಯಕರು (ಸ್ವೀಮರ)	22034202
19	ಶೀಘ್ರಲಿಪಿಗಾರರು (ಸಮನ್ವಯ)	22034198
20	ಶೀಘ್ರಲಿಪಿಗಾರರು (ಆಹಾರ–2)	22034199
21	ಕಿರಿಯ ಸಹಾಯಕರು (ಆಹಾರ–1)	22034219
22	ಕಿರಿಯ ಸಹಾಯಕರು (ಆಹಾರ–2)	22034218
23	ಕಿರಿಯ ಸಹಾಯಕರು (ಸಮನ್ವಯ)	22034198
24	ಕಿರಿಯ ಸಹಾಯಕರು–1 (ಸ್ವೀಮರ)	22034202
25	ಕಿರಿಯ ಸಹಾಯಕರು–2 (ಸ್ವೀಮರ)	22034202
26	ಬೆರಳಚ್ಚುಗಾರರು (ಆಹಾರ–1)	22034219
27	ಬೆರಳಚ್ಚುಗಾರರು (ಆಹಾರ–2)	22034218
28	ಬೆರಳಚ್ಚುಗಾರರು (ಸ್ವೀಮರ)	22034202
29	ಬೆರಳಚ್ಚುಗಾರರು (ಆಹಾರ–3)	22034209
30	ವಾಹನ ಚಾಲಕರು	–
31	ದಲಾಯತ್ (ಕಾರ್ಯದರ್ಶಿಯವರ ಆಪ್ತ ಶಾಖೆ)	22259024/ 22034652
32	ದಲಾಯತ್ (ಆಹಾರ–1)	–
33	ದಲಾಯತ್ (ಆಹಾರ–2)	–
34	ದಲಾಯತ್ (ಸಮನ್ವಯ)	22034198
35	ದಲಾಯತ್ (ಸ್ವೀಮರ)	22034209

(X) ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ವೇತನ:

ಕ್ರ.ಸಂ.	ಪದನಾಮ	ತಿಂಗಳ ಒಟ್ಟು ವೇತನ (₹.)
01	ಸರ್ಕಾರದ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ, ಬೆಂಗಳೂರು–1	1,56,978/–
02	ಸರ್ಕಾರದ ಉಪ ಕಾರ್ಯದರ್ಶಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸಸೌಧ, ಬೆಂಗಳೂರು–1.	94,273/–
03	ಸರ್ಕಾರದ ಅಧೀನ ಕಾರ್ಯದರ್ಶಿ (ಆಹಾರ– 2)	48,208/–
04	ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ)	–
05	ಶಾಖಾಧಿಕಾರಿ (ಆಹಾರ–1)	–
06	ಶಾಖಾಧಿಕಾರಿ (ಆಹಾರ–2)	43,635/–
07	ಶಾಖಾಧಿಕಾರಿ (ಆಹಾರ–3)	47,171/–
08	ಶಾಖಾಧಿಕಾರಿ (ಸ್ವೀಮರ)	41,286/–

ಕ್ರ.ಸಂ.	ಪದನಾಮ	ತಿಂಗಳ ಒಟ್ಟು ವೇತನ (₹.)
09	ಹಿರಿಯ ಆಪ್ತ ಕಾರ್ಯದರ್ಶಿ (ಕಾರ್ಯದರ್ಶಿಯವರ ಆಪ್ತಶಾಖೆ)	92,032/–
10	ಭಾಷಾಂತರಕಾರರು (ಹಿರಿಯ ಸಹಾಯಕರು) (ಕಾರ್ಯದರ್ಶಿಯವರ ಆಪ್ತ ಶಾಖೆ)	–
11	ಪತ್ರಾಂಕಿತ ಆಪ್ತ ಸಹಾಯಕರು (ಕಾರ್ಯದರ್ಶಿಯವರ ಆಪ್ತ ಶಾಖೆ)	39,815/–
12	ಆಪ್ತ ಸಹಾಯಕರು (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	29,267/–
13	ಹಿರಿಯ ಸಹಾಯಕರು (ಆಹಾರ–2)	34,050/–
14	ಹಿರಿಯ ಸಹಾಯಕರು (ಆಹಾರ–3)	36,306/–
15	ಹಿರಿಯ ಸಹಾಯಕರು (ಸಮನ್ವಯ)	34,480/–
16	ಸಹಾಯಕರು (ಆಹಾರ–1)	27,674/–
17	ಸಹಾಯಕರು –1 (ಆಹಾರ–2)	29,002/–
18	ಸಹಾಯಕರು–2 (ಆಹಾರ–2)	27,020/–
19	ಸಹಾಯಕರು (ಸ್ವೀಮರ)	30,149/–
20	ಶೀಘ್ರಲಿಪಿಗಾರರು (ಸಮನ್ವಯ)	–
21	ಶೀಘ್ರಲಿಪಿಗಾರರು (ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ)	30,199/–
22	ಕಿರಿಯ ಸಹಾಯಕರು (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	–
23	ಕಿರಿಯ ಸಹಾಯಕರು (ಆಹಾರ–1)	20,785/–
24	ಕಿರಿಯ ಸಹಾಯಕರು (ಆಹಾರ–2)	–
25	ಕಿರಿಯ ಸಹಾಯಕರು (ಸಮನ್ವಯ)	–
26	ಕಿರಿಯ ಸಹಾಯಕರು–1 (ಸ್ವೀಮರ)	–
27	ಕಿರಿಯ ಸಹಾಯಕರು–2 (ಸ್ವೀಮರ)	20,785/–
28	ಬೆರಳಚ್ಚುಗಾರರು (ಆಹಾರ–1)	–
29	ಬೆರಳಚ್ಚುಗಾರರು (ಆಹಾರ–2)	23,161/–
30	ಬೆರಳಚ್ಚುಗಾರರು (ಸ್ವೀಮರ)	–
31	ಬೆರಳಚ್ಚುಗಾರರು (ಆಹಾರ–3)	20,505/–
32	ವಾಹನ ಚಾಲಕರು	–
33	ಜಮೇದಾರ್ (ಕಾರ್ಯದರ್ಶಿಯವರ ಆಪ್ತ ಶಾಖೆ)	–
34	ಜಮೇದಾರ್ (ಉಪ ಕಾರ್ಯದರ್ಶಿಯವರ ಆಪ್ತ ಶಾಖೆ)	33,784/–
35	ದಲಾಯತ್ (ಆಹಾರ–1)	–
36	ದಲಾಯತ್ (ಆಹಾರ–2)	21,500/–
37	ದಲಾಯತ್ (ಸಮನ್ವಯ)	–
38	ದಲಾಯತ್ (ಸ್ವೀಮರ)	–

ಕೆ.ಸಿ.ಎಸ್.ಆರ್. ನಿಯಮಗಳನ್ವಯ ವೇತನ ಭತ್ಯೆಗಳನ್ನು ಪಾವತಿ ಮಾಡಲಾಗುತ್ತಿದೆ.

(Xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ವ್ಯಾಪ್ತಿಯಲ್ಲಿ ಬರುವ (1) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ (2) ನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, (3) ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಇವರಿಗೆ 2014–15 ಮತ್ತು 2015–16ನೇ ಸಾಲಿಗೆ ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ನಿಗಧಿಪಡಿಸಲಾದ ಅನುದಾನ ಈ ಕೆಳಕಂಡಂತಿದೆ:

(₹. ಲಕ್ಷಗಳಲ್ಲಿ)

ಕ್ರ. ಸಂ	ಇಲಾಖೆ	ಲೆಕ್ಕಶೀರ್ಷಿಕೆ	2014–15 ಯೋಜನೆ	ಯೋಜನೇತರ	ಒಟ್ಟು	2015–16 ಯೋಜನೆ	ಯೋಜನೇತರ	ಒಟ್ಟು
1	ಆಯುಕ್ತರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ							
	2408–01–001–0–01		–	5557.50	5557.50	–	729611.00	729611.00
	3456–00–104–0–02 3456–00–104–0–03		–	–	–	10.52	47.00	57.52
2	ನಿಯಂತ್ರಕರು ಕಾನೂನು ಮಾಪನಶಾಸ್ತ್ರ ಇಲಾಖೆ							
	3475–00–106–0–01		100.00	1641.74	1741.74	275.00	1760.00	2035.00
	5475–00–800–0–02		550.00	–	550.00	1355.00	–	1355.00
3	ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ ಕರ್ನಾಟಕ ರಾಜ್ಯ ವ್ಯಾಜ್ಯಗಳ ಪರಿಹಾರ ಆಯೋಗ							
	3456–00–102–0–01		–	1144.41	1144.41	1407.00		1407.00

(Xii) ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ:

ಸಹಾಯಧನ ಒಳಗೊಂಡಿರುವ ಕಾರ್ಯಕ್ರಮಗಳ ವಿವರಗಳು(ದಿನಾಂಕ: 25–05–2016ರಲ್ಲಿದ್ದಂತೆ)

ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ:

ಈ ಇಲಾಖೆಯಲ್ಲಿ ಗ್ರಾಹಕರ ಚಟುವಟಿಕೆ, ಶಾಲೆಗಳಲ್ಲಿ ಗ್ರಾಹಕರ ಕ್ಲಬ್ ಸ್ಥಾಪನೆಗಾಗಿ ಹಾಗೂ ರಾಜ್ಯ ಗ್ರಾಹಕರ ಸಹಾಯವಾಣಿಗೆ ಗ್ರಾಹಕರ ಕಲ್ಯಾಣ ನಿಧಿ ಸಭೆಯಲ್ಲಿ ಚರ್ಚಿಸಿ ಅನುಮೋದಿಸಿರುವಂತೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ.

'ಅನ್ನಭಾಗ್ಯ' ಯೋಜನೆ:

ಸಾರ್ವಜನಿಕ ವಿತರಣಾ ಪದ್ಧತಿಯಡಿ ಅರ್ಹ ಫಲಾನುಭವಿಗಳಿಗೆ ಪೌಷ್ಠಿಕ ಆಹಾರವನ್ನು ಒದಗಿಸುವ ಹಾಗೂ ರಾಜ್ಯವನ್ನು ಹಸಿವು ಮುಕ್ತ ಕರ್ನಾಟಕವನ್ನಾಗಿಸುವ ದೃಷ್ಠಿಯಿಂದ 2013ರ ಜುಲೈ 10 ರಿಂದ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ ಹಾಗೆಯೇ ಜನವರಿ 2014ರಿಂದ ರಾಜ್ಯದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013ನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯ ಪ್ರಕಾರ ಬಿ.ಪಿ.ಎಲ್, ಎ.ಪಿ.ಎಲ್ ಕುಟುಂಬಗಳೆಂಬ ಪರಿಕಲ್ಪನೆಯನ್ನು ತ್ಯಜಿಸಿ "ಆದ್ಯತಾ ಕುಟುಂಬಗಳು" ಮತ್ತು "ಆದ್ಯತೇತರ ಕುಟುಂಬಗಳು" ಎಂಬ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ **ಎ.ಎ.ವೈ** ಮತ್ತು **ಬಿ.ಪಿ.ಎಲ್** ಪಡಿತರ ಚೀಟಿಗಳ ಕುಟುಂಬಗಳನ್ನು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಲ್ಲಿ ಆದ್ಯತಾ ಕುಟುಂಬಗಳೆಂದು ಪರಿಗಣಿಸುವುದರೊಂದಿಗೆ ಎಎವೈ ಪಡಿತರ ಚೀಟಿಗಳಿಗೆ ತಲಾ 35 ಕೆ.ಜಿ ಆಹಾರಧಾನ್ಯವನ್ನು (29 ಕೆ.ಜಿ ಅಕ್ಕಿ ಹಾಗೂ 6 ಕೆ.ಜಿ ಗೋಧಿ) ಹಾಗೂ ಆದ್ಯತಾ ಕುಟುಂಬಗಳಿಗೆ ಯೂನಿಟ್ ಆಧಾರದಲ್ಲಿ ಪ್ರತಿ ಸದಸ್ಯರಿಗೆ ತಲಾ 5 ಕೆ.ಜಿ ಯಂತೆ ಆಹಾರಧಾನ್ಯಗಳನ್ನು (4 ಕೆ.ಜಿ ಅಕ್ಕಿ ಹಾಗೂ 1 ಕೆ.ಜಿ ಗೋಧಿ/ ರಾಗಿ / ಜೋಳ) ಉಚಿತವಾಗಿ ವಿತರಿಸಲಾಗುತ್ತಿದೆ. ಪ್ರಸ್ತುತ, ಈ ಯೋಜನೆಯ ಫಲಾನುಭವಿಗಳ ಪಡಿತರ ಚೀಟಿಗಳ ಸಂಖ್ಯೆ 10045089 ಇರುತ್ತದೆ.

ಇದಲ್ಲದೆ ಎ.ಎ.ವೈ ಮತ್ತು ಬಿ.ಪಿ.ಎಲ್ (ಆದ್ಯತಾ ಕುಟುಂಬಗಳು) ಪಡಿತರ ಚೀಟಿಗಳಿಗೆ ರಿಯಾಯಿತಿ ದರದಲ್ಲಿ ಪ್ರತಿ ಪಡಿತರ ಚೀಟಿಗೆ ಪ್ರತಿ ಕೆ.ಜಿ.ಗೆ **₹.** 2/–ರಂತೆ 1 ಕೆ.ಜಿ ಅಯೋಡಿನ್‌ಯುಕ್ತ ಉಪ್ಪು, ಪ್ರತಿ ಲೀ.ಗೆ **₹.** 25/–ರಂತೆ 1 ಲೀ. ತಾಳೆಎಣ್ಣೆ ಹಾಗೂ ಪ್ರತಿ ಕೆ.ಜಿಗೆ **₹.** 13.50 ರಂತೆ 1 ಕೆ.ಜಿ ಸಕ್ಕರೆಯನ್ನು ವಿತರಿಸಲಾಗುತ್ತಿದೆ.

"ಅಂತ್ಯೋದಯ ಅನ್ನ ಯೋಜನೆ":

ಕೇಂದ್ರ ಸರ್ಕಾರವು ಎರಡು ಹೊತ್ತು ಊಟಕ್ಕೆ ಗತಿ ಇಲ್ಲದ ಅತ್ಯಂತ ಕಡು ಬಡವರಿಗಾಗಿ ಅಂತ್ಯೋದಯ ಅನ್ನ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದಲ್ಲಿ ಆಗಸ್ಟ್ 2002 ರಿಂದ ಅನುಷ್ಠಾನಗೊಳಿಸಲಾಗಿರುತ್ತದೆ. ಬಡತನ ರೇಖೆಯಲ್ಲಿ ಅತ್ಯಂತ ಕೆಳಗಿನ ಸ್ತರದ ಕುಟುಂಬಗಳಾದ ಭೂ ರಹಿತ ಕೃಷಿ ಕಾರ್ಮಿಕರು, ವಿಧವೆಯು ಮುಖ್ಯಸ್ಥರಾಗಿರುವ ಕುಟುಂಬಗಳು, ಯಾವುದೇ ನಿರ್ದಿಷ್ಟ ವರಮಾನವಿಲ್ಲದ ಹೆಚ್.ಐ.ವಿ ಪೀಡಿತರು/ ಬಾಧಿತರು ಇರುವ ಕುಟುಂಬಗಳು, ಯಾವುದೇ ನಿರ್ದಿಷ್ಟ ವರಮಾನವಿಲ್ಲದ ವೃದ್ಧರು ಮುಖ್ಯಸ್ಥರಾಗಿರುವ ಕುಟುಂಬಗಳು, ಅಂಗವಿಕಲರು, ಮಾನಸಿಕ ಅಸ್ವಸ್ಥರಾಗಿರುವವರು ಹಾಗೂ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಇಲ್ಲದ 60 ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನವರು ಈ ಯೋಜನೆಯ ಫಲ ಪಡೆಯಲು ಅರ್ಹರಾಗಿರುತ್ತಾರೆ.

ಪ್ರಸ್ತುತ, ರಾಜ್ಯದಲ್ಲಿ 824665 ಅಂತ್ಯೋದಯ ಅನ್ನಯೋಜನೆಯ ಪಡಿತರ ಚೀಟಿಗಳಿಗೆ ಆಹಾರಧಾನ್ಯಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಪ್ರತಿ ಕುಟುಂಬಕ್ಕೆ 29 ಕೆ.ಜಿ ಅಕ್ಕಿ ಮತ್ತು 6 ಕೆ.ಜಿ ಗೋಧಿ ಹೀಗೆ ಒಟ್ಟು 35 ಕೆ.ಜಿಯಂತೆ ಆಹಾರಧಾನ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಎ.ಪಿ.ಎಲ್ ಪಡಿತರ ಚೀಟಿಗಳಿಗೆ ಆಹಾರಧಾನ್ಯಗಳ ಹಂಚಿಕೆ:

ರಾಜ್ಯದಲ್ಲಿ ಆಹಾರಧಾನ್ಯಗಳನ್ನು ಪಡೆಯಲು ಇಚ್ಛೆವ್ಯಕ್ತಪಡಿಸಿ ಆನ್‌ಲೈನ್‌ನಲ್ಲಿ ನೋಂದಾಯಿಸಿರುವ ಎ.ಪಿ.ಎಲ್ ಪಡಿತರ ಚೀಟಿದಾರರಿಗೆ (ಆದ್ಯತೇತರ ಕುಟುಂಬ) ರಿಯಾಯಿತಿ ದರದಲ್ಲಿ ಒಬ್ಬ ಸದಸ್ಯರಿರುವ ಪಡಿತರ ಚೀಟಿಗೆ 5 ಕೆ.ಜಿ ಆಹಾರ ಧಾನ್ಯವನ್ನು (3 ಕೆ.ಜಿ ಅಕ್ಕಿ ಹಾಗೂ 2 ಕೆ.ಜಿ ಗೋಧಿ) ಹಾಗೂ ಒಬ್ಬರಿಗಿಂತ ಹೆಚ್ಚು ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ ಆಹಾರಧಾನ್ಯವನ್ನು (5 ಕೆ.ಜಿ ಅಕ್ಕಿ ಹಾಗೂ 5 ಕೆ.ಜಿ ಗೋಧಿ) ಪ್ರತಿ ಕೆ.ಜಿ ಅಕ್ಕಿಗೆ ₹. 15/–ರ ದರದಲ್ಲಿ ಹಾಗೂ ಪ್ರತಿ ಕೆ.ಜಿ ಗೋಧಿಗೆ ₹. 10/–ರ ದರದಂತೆ ವಿತರಿಸಲಾಗುತ್ತಿದೆ. ಪ್ರಸ್ತತ, ರಾಜ್ಯದಲ್ಲಿ 174703 ಎ.ಪಿ.ಎಲ್ ಪಡಿತರ ಚೀಟಿದಾರರಿಗೆ ಆಹಾರಧಾನ್ಯವನ್ನು ಹಂಚಿಕೆ ಮಾಡಲಾಗಿರುತ್ತದೆ.

ಪಡಿತರ ಖಾತ್ರಿ ಯೋಜನೆ:

ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳನ್ನು ಸಕಾಲದಲ್ಲಿ ಪೂರೈಸುವ ಸಲುವಾಗಿ ಪಡಿತರ ಖಾತ್ರಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತಂದಿದ್ದು, ಆ ಪ್ರಕಾರ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಪಡಿತರ ಆಹಾರ ವಸ್ತುಗಳನ್ನು ಪ್ರತಿ ಮಾಹೆಯ ಮೊದಲ ದಿನದಿಂದಲೇ ವಿತರಿಸಬೇಕಾಗಿರುತ್ತದೆ.

ನ್ಯಾಯಬೆಲೆ ಅಂಗಡಿಗಳು ಪ್ರತಿ ಮಾಹೆಯ ಎಲ್ಲಾ ದಿನಗಳು ಬೆಳಗ್ಗೆ 8.00 ರಿಂದ ಮಧ್ಯಾಹ್ನ 12.00 ವರೆಗೆ ಮತ್ತು ಸಂಜೆ 4.00 ರಿಂದ 8.00 ಗಂಟೆಯವರೆಗೆ ತಪ್ಪದೆ ತೆರೆಯಬೇಕಾಗಿರುತ್ತದೆ. (ಪ್ರತಿ ಮಂಗಳವಾರ ಮತ್ತು ರಾಜ್ಯ ಸರ್ಕಾರದ ಇತರೆ ರಜಾ ದಿನಗಳನ್ನು ಹೊರತುಪಡಿಸಿ) ಈ ಕ್ರಮದಿಂದಾಗಿ ಪ್ರತಿ ಮಾಹೆ 1ನೇ ತಾರೀಖಿನಿಂದಲೇ ಪಡಿತರ ಚೀಟಿದಾರರಿಗೆ ಪಡಿತರ ವಸ್ತುಗಳು ದೊರೆಯುತ್ತದೆ.

(Xiii) ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ:

ಈ ಸಚಿವಾಲಯದಿಂದ ನೇರವಾಗಿ ಯಾವುದೇ ರಿಯಾಯಿತಿ, ಅನುಮತಿ ಅಥವಾ ಅಧಿಕಾರ ಪತ್ರಗಳನ್ನು ವಿತರಿಸುವುದಿಲ್ಲ.

(XiV) ಇಲಾಖೆಯಲ್ಲಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ:

ಇದು http://ahara.kar.nic.in ಈ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

(XV) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ:

ಈ ಇಲಾಖೆಯಲ್ಲಿ ಸಾರ್ವಜನಿಕ ಉಪಯೋಗಕ್ಕೆ ಪ್ರತ್ಯೇಕ ಗ್ರಂಥಾಲಯ ಇರುವುದಿಲ್ಲ.

(XVi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು:

I ಸಾರ್ವಜನಿಕ ಮಾಹಿತಿ ಅಧಿಕಾರಿಗಳು

ಕ್ರ.ಸಂ.	ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ
1	ಶ್ರೀಮತಿ ಅರ್ಚನ ಎಂ.ಎಸ್ ಸರ್ಕಾರದ ಅಧೀನ ಕಾರ್ಯದರ್ಶಿ (ಆಹಾರ– 2) ಕೊಠಡಿ ಸಂಖ್ಯೆ:19, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು–1	22034199
2	ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ ಮತ್ತು ಸ್ಕೀಮರ) ಕೊಠಡಿ ಸಂಖ್ಯೆ:34, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು–1	22034198

II ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು:

ಕ್ರ.ಸಂ	ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ
1	ಶ್ರೀ ಪಿ. ಶ್ರೀನಿವಾಸ, ಸರ್ಕಾರದ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಕೊಠಡಿ ಸಂಖ್ಯೆ:30, ನೆಲಮಹಡಿ, ವಿಕಾಸಸೌಧ, ಬೆಂಗಳೂರು–1.	22034652
2	ಶ್ರೀ ಕೆ. ಮಂಜುನಾಥ್ ಶಾಖಾಧಿಕಾರಿ, ಆಹಾರ–3 ಶಾಖೆ, ಕೊಠಡಿ ಸಂಖ್ಯೆ:34 ನೆಲಮಹಡಿ, ವಿಕಾಸಸೌಧ, ಬೆಂಗಳೂರು–1.	22034209
3	ಶಾಖಾಧಿಕಾರಿ, ಆಹಾರ–1 ಶಾಖೆ, ಕೊಠಡಿ ಸಂಖ್ಯೆ:19 ನೆಲಮಹಡಿ, ವಿಕಾಸಸೌಧ, ಬೆಂಗಳೂರು–1.	22034219
4	ಶ್ರೀ ಸಿ.ಎಸ್.ಶಿವಕುಮಾರಸ್ವಾಮಿ ಶಾಖಾಧಿಕಾರಿ, ಆಹಾರ–2 ಶಾಖೆ, ಕೊಠಡಿ ಸಂಖ್ಯೆ:19, ನೆಲಮಹಡಿ, ವಿಕಾಸಸೌಧ, ಬೆಂಗಳೂರು–1.	22034218

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಕ್ರ.ಸಂ	ಹೆಸರು ಮತ್ತು ಪದನಾಮ	ದೂರವಾಣಿ ಸಂಖ್ಯೆ
5	ಶ್ರೀ ಗುರುನಾಥ ರೆಡ್ಡಿ ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಕೊಠಡಿ ಸಂಖ್ಯೆ:34 ನೆಲಮಹಡಿ, ವಿಕಾಸಸೌಧ, ಬೆಂಗಳೂರು–1	22034202

ಮೇಲ್ಮನವಿ ಪ್ರಾಧಿಕಾರ:

ಕ್ರ.ಸಂ	ಪದನಾಮ	ದೂರವಾಣಿ ಸಂಖ್ಯೆ
1	ಸರ್ಕಾರದ ಉಪ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕೊಠಡಿ ಸಂಖ್ಯೆ: 19, ನೆಲಮಹಡಿ, ವಿಕಾಸಸೌಧ, ಬೆಂಗಳೂರು–560 001.	22034189 ಫ್ಯಾಕ್ಸ್ ನಂ:22353959

(XVii) ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸುವುದು :

ಈ ಮೇಲಿನ ಮಾಹಿತಿಯನ್ನು ಆಗಿಂದಾಗ್ಗೆ ಪರಿಷ್ಕರಿಸಿ ನವೀಕರಿಸಲಾಗುತ್ತದೆ. ಇನ್ನಿತರೆ ವಿಷಯಗಳು ಯಾವುದೂ ಇರುವುದಿಲ್ಲ.

ಅರ್ಚನ ಎಂ.ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ
(ಆಹಾರ 1 ಮತ್ತು 2)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

PR-570
SC-50

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.